ದಿನಾಂಕ 30-05-2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿಯ ಪರ ಶ್ರೀ ಪಿ ಬಿ ಎ ವಕೀಲರಿಂದ .

3 ನೇ ವಾದಿ ನನ್ನ ಅಕ್ಕ ಆಗಬೇಕು. 1 ನೇ ವಾದಿಯು ನನಗೆ ಮತ್ತು 3 ನೇ ವಾದಿಗೆ ತಾಯಿಯಾಗಬೇಕು. 2 ನೇ ವಾದಿಯು ಪ್ರತಿವಾದಿಯ ತಾಯಿ ಎಂದರೆ ಸರಿ. 1 ಮತ್ತು 2 ನೇ ವಾದಿಯರಿಗೆ ಆರೋಗ್ಯ ಸಮಸ್ಯೆಯಿಂದ ಈ ದಿನ ನ್ಯಾಯಲಯಕ್ಕೆ ಬಂದಿರುವುದಿಲ್ಲ. 3 ನೇ ವಾದಿ ಮತ್ತು ನನ್ನ ಗಂಡ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ. 1 ಮತ್ತು 2 ನೇ ವಾದಿಯರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎನ್ನುವುದಕ್ಕೆ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿಲ್ಲ.

1, 3 ನೇ ವಾದಿ ಹಾಗೂ ನಾನು ಮೃತ ಇಸ್ಮಾಯಿಲ್ ಶೇಖ್ ರವರ ವಾರಸುದಾರರು ಎಂದು ತೋರಿಸಲು ನಮ್ಮ ಬಳಿ ವಾರಸಾ ಪ್ರಮಾಣ ಪತ್ರ ಇರುತ್ತದೆ. ಆದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 3 ನೇ ವಾದಿಯ ಗಂಡನ ಊರು ಬಿ.ಕೆ.ಹಳ್ಳಿ ಗ್ರಾಮ. 1 ನೇ ವಾದಿ ಹಾಗೂ 3 ನೇ ವಾದಿ ಒಂದೇ ಮನೆಯಲ್ಲಿ ಇರುತ್ತಾರೆ. 3 ನೇ ವಾದಿಯ ಮದುವೆ ಅಂದಾಜು 25 ವರ್ಷಗಳ ಹಿಂದೆ ಆಗಿರುತ್ತದೆ. ಆಗಿನಿಂದಲೂ ಸಹ 3 ನೇ ವಾದಿಯು ತನ್ನ ಗಂಡನ ಜೊತೆ ಇದ್ದಾಳೆ ಎಂದರೆ ಸಾಕ್ಷಿ ತನ್ನ ತಾಯಿಯ ಜೊತೆ ಇದ್ದಾರೆ ಎನ್ನುತ್ತಾರೆ. ನನ್ನ ಮದುವೆ ಸುಮಾರು 30 ವರ್ಷಗಳ ಹಿಂಂದೆ ಆಗಿರುತ್ತದೆ. ಆಗಿನಿಂದಲೂ ನಾನು ನನ್ನ ಗಂಡನ ಮನೆಯಲ್ಲಿ ಇದ್ದೇನೆ ಎಂದರೆ ಸರಿ. ನನ್ನ ಮತ್ತು 3 ನೇ ವಾದಿಯ ಮದುವೆಯ ಪೂರ್ವದಲ್ಲಿ ನಾವಿಬ್ಬರೂ ನಮ್ಮ ತಾಯಿಯ ಜೊತೆ ಇದ್ದೇವು ಎಂದರೆ ಸರಿ.

1 ನೇ ವಾದಿ, 3 ನೇ ವಾದಿ ಹಾಗೂ ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನಾವು ಎರಡು ಸರ್ವೇ ನಂಬರಗಳ ಜಮೀನಿನ ಬಾಬ್ತು ಸಲ್ಲಿಸಿದ್ದೇವೆ. ಸದರಿ ಎರಡೂ ಜಮೀನುಗಳು ಇಸ್ಮಾಯಿಲ್ ಶೇಖ್ ರವರಿಗೆ ಸರ್ಕಾರದಿಂದ ಮಂಜೂರಾದ ಜಮೀನುಗಳು ಎಂದರೆ ಸರಿ. ಸದರಿ ಜಮೀನುಗಳನ್ನು ಇಸ್ಮಾಯಿಲ್ ಶೇಖ್ ರವರು ಪ್ರತಿವಾದಿಗೆ ನೋಂದಾಯಿತ ಭಕ್ಷೀಸ್ ಪತ್ರದ ಮೂಲಕ ದಾನ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾನ ಪತ್ರವನ್ನು ತನಗೆ ಮತ್ತು 1 ಹಾಗೂ 3 ನೇ ವಾದಿಗೆ ಗೊತ್ತಿಲ್ಲದಂತೆ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ ಹಾಗೂ

ಸದರಿ ದಾನ ಪತ್ರವನ್ನು ಇಸ್ಮಾಯಿಲ್ ಶೇಖ್ ರವರಿಗೆ ಬೆದರಿಕೆ ಹಾಕಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ದಾನ ಪತ್ರವನ್ನು ಉಪ–ನೋಂದಣಾಧಿಕಾರಿ ಕಚೇರಿಯಲ್ಲಿ ನೊಂದು ಮಾಡುವಾಗ ನಾವು ಜಾಗದಲ್ಲಿ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬೆದರಿಕೆಯ ವಿಷಯವನ್ನು ತನ್ನ ತಂದೆಯಾದ ಇಸ್ಮಾಯಿಲ್ ಶೇಖ್ ರವರು ಮನೆಗೆ ಬಂದ ನಂತರ ಹೇಳಿದರು ಎನ್ನುತ್ತಾರೆ. ಸದರಿ ವಿಚಾರವನ್ನು ನಮ್ಮ ವಾದ ಪತ್ರದಲ್ಲಿ ಹೇಳಿರುತ್ತೇವೆ. ಸದರಿ ಬೆದರಿಕೆಯ ವಿಷಯವನ್ನು ಇಸ್ಮಾಯಿಲ್ ಶೇಖ್ ರವರು ತಾನು ಸಾಯುವ ಒಂದು ತಿಂಗಳ ಹಿಂದೆ ನಮಗೆ ತಿಳಿಸಿದ್ದರು. ಆ ಕಾಲಕ್ಕೆ ಇಸ್ಮಾಯಿಲ್ ಶೇಖ್ ರವರಿಗೆ ನೀವು ಏನು ಹೇಳಿದೀರಿ ಎಂದರೆ ಸಾಕ್ಷಿಯು ಇಸ್ಮಾಯಿಲ್ ಶೇಖ್ ರವರಿಗೆ ಏನು ಹೇಳುವ ಸ್ಥಿತಿಯಲ್ಲಿ ಇರಲಿಲ್ಲ ಎನ್ನುತ್ತಾರೆ. ಇಸ್ಮಾಯಿಲ್ ಶೇಖ್ ರವರು ನಮ್ಮ ತಂದೆ ಎಂದು ನಿರಾಧಾರವಾಗಿ ಹೇಳುತ್ತಿದ್ದೇವೆ ಹಾಗೂ ಆತನು ಬೆದರಿಕೆಯ ವಿಷಯ ನಮಗೆ ತಿಳಿಸಿದನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ದಾನ ಪತ್ರ ಯಾವ ದಿನಾಂಕದಂದು ನೋಂದಣಿ ಆಗಿರುತ್ತದೆ ಎನ್ನುವುದು ಗೊತ್ತಿಲ್ಲ. ಇಸ್ಮಾಯಿಲ್ ಶೇಖ್ ರವರು ಸುಮಾರು 3–4 ವರ್ಷಗಳ ಹಿಂದೆ ಹಳಿಯಾಳ ಪಟ್ಟಣದಲ್ಲಿ ತೀರಿಕೊಂಡಿರುತ್ತಾರೆ. ಆದರೆ ಯಾವ ದಿನಾಂಕ, ತಿಂಗಳು ಹಾಗೂ ವರ್ಷ ಎನ್ನುವುದು ಗೊತ್ತಿಲ್ಲ. ಇಸ್ಮಾಯಿಲ್ ಶೇಖ್ ರವರು ಹಳಿಯಾಳ ಪಟ್ಟಣದ ದೇಶಪಾಂಡೆ ನಗರದ ಪ್ರತಿವಾದಿಯ ವಾಸ್ತವ್ಯದ ಮನೆಯಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ಭಕ್ಷಿಸ್ ಪತ್ರವನ್ನು ನೋಂದಣಿ ಮಾಡುವ ಕಾಲಕ್ಕೆ ಯಾರು ಯಾರು ಹಾಜರಿದ್ದರು ಹಾಗೂ ಸದರಿ ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಯಿಂದ ಕಸಿದುಕೊಳ್ಳುವ ಉದ್ದೇಶದಿಂದ ದಾವೆ ಸಲ್ಲಿಸಲು ಯಾವುದೇ ಸಕಾರಣ ಇಲ್ಲದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ ಮತ್ತು ಬುದ್ಧ್ಯಾಪೂರ್ಕವಾಗಿ 1 ಹಾಗೂ 3 ನೇ ವಾದಿಯರನ್ನು ನ್ಯಾಯಾಲಯದಿಂದ ನಾನು ದೂರ ಇಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.